ಇ) ಮೇಲಿನ ಯೋಜನೆ ಕಾರ್ಯಗತಗೊಂಡ ನಂತರ ಹೊಸ ಬಾವಿಯ ಅವಶ್ಯಕತೆ ಬರುವುದಿಲ್ಲ.

ಲಿಂಗಸೂಗೂರು ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ

1538 (554) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸೂಗೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಯಚೂರು ಜಿಲ್ಲೆಯ ಲಿಂಗಸೂಗೂರು ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆಯು ಸಧ್ಯದಲ್ಲಿ ಯಾವ ಹಂತದಲ್ಲಿದೆ?

2) ಸದರಿ ಯೋಜನೆಗೆ ನಿಗದಿಪಡಿಸಿದ ಒಟ್ಟು ಅಂದಾಜು ಹಣವೆಷ್ಟು

3) ಸದರಿ ಯೋಜನೆಗೆ ಇಲ್ಲಿಯವರೆಗೆ ಒಟ್ಟು ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಕಾಮಗಾರಿಯು ಮಂದಗತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಸದರಿ ಯೋಜನೆಯು ಯಾವಾಗ ಮುಕ್ತಾಯಗೊಳ್ಳುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

1) ಈ ಯೋಜನೆಗೆ ಇಂಪೌಂಡಿಂಗ್ ಜಲಾಶಯ ಮತ್ತು ಚಾಕ್ವೆಲ್ ಕಂ ಪಂಪ್ ಹೌಸ್‌ನ ಕಾಮಗಾರಿಯು ಶೇ. 90ರಷ್ಟು ಮುಗಿದಿದ್ದು ಒಟ್ಟಾರೆ ಯೋಜನೆಯ ಕಾಮಗಾರಿಗಳು ಶೇ. 70ರಷ್ಟು ಮುಗಿದಿರುತ್ತದೆ. ಉಳಿದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

2) ಈ ಯೋಜನೆಗೆ ಮಂಜೂರಾಗಿರುವ ಅಂದಾಜು ವೆಚ್ಚ ರೂ. 1609.79 ಲಕ್ಷಗಳು.

3) ಇಲ್ಲಿಯವರೆಗೆ ಈ ಕಾಮಗಾರಿಗೆ ರೂ. 1013.05 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯ ನೀರು ಸಂಗ್ರಹಣ ಕೆರೆ ಮತ್ತು ಜಲಶುದ್ಧೀಕರಣ ಘಟಕದ ಕಾಮಗಾರಿಗಳಿಗೆ ಭೂಸ್ವಾಧೀನತೆಯಲ್ಲಿನ ವಿಳಂಬದಿಂದಾಗಿ ಪ್ರಾರಂಭದಲ್ಲಿ ಕಾಮಗಾರಿ ಮಂದಗತಿಯಲ್ಲಿದೆ. ಈಗ ಕಾಮಗಾರಿಯು ಪೂರ್ಣ ಪ್ರಗತಿಯಲ್ಲಿದೆ.

4) ಈ ಕಾಮಗಾರಿಯನ್ನು ಮಾರ್ಚ್ 2003ಕ್ಕೆ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿರುವ ಪಟ್ಟಣ ಪಂಚಾಯಿತ್ತಿಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾಪ

1539 (1958) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಟ್ಟಣ ಪಂಚಾಯತ್ತಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು).

ಆ) ಈ ಪಟ್ಟಣ ಪಂಚಾಯ್ತಿಗಳನ್ನು ಉನ್ನತೀಕರಿಸಲು (ಮೇಲ್ದರ್ಜೆ) ಸರ್ಕಾರ ತೀರ್ಮಾನ ಕೈಗೊಂಡಿದೆಯೇ; ಯಾವಾಗಿನಿಂದ ಉನ್ನತೀಕರಿಸಲಾಗುವುದು.

ಇ) ಮೇಲ್ದರ್ಜೆಗೇರಿಸುವ ಕ್ರಮದ ಮಾನದಂಡಗಳೇನು;

ಈ) ಮೇಲ್ದರ್ಜೆಗೇರಿಸಲು ಉದ್ದೇಶಿಸಿರುವ ಪ್ರಸ್ತುತ ಪಟ್ಟಣ ಪಂಚಾಯ್ತಿಗಳ್ಯಾವುವು; ಕೊಡಗು ಜಿಲ್ಲೆಯ ಯಾವ ಪಟ್ಟಣ ಪಂಚಾಯ್ತಿಗಳು ಈ ಯೋಜನೆ ವ್ಯಾಪ್ತಿಗೊಳಪಡುತ್ತವೆ; ವಿವರ ನೀಡುವುದು.

ಉ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಖರ್ಚು ಎಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) 92 (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಕರ್ನಾಟಕ ಪುರಸಭೆ ಕಾಯ್ದೆ 1964 ರ ಪರಿಶ್ಚೇದ 3 ಮತ್ತು 9 ರಲ್ಲಿ ಪ್ರಚುರ ಪಡಿಸಿರುವಂತೆ ಜನ ಸಂಖ್ಯೆ, ಆದಾಯ ಇತ್ಯಾದಿಗಳ ಆಧಾರದ ಮೇಲೆ ಜಿಲ್ಲಾಧಿಕಾರಿಯವರಿಂದ ಬರುವ ಪೂರ್ಣ ಪ್ರಮಾಣದ ಪ್ರಸ್ತಾವನೆಯನ್ವಯ ಮೇಲ್ದರ್ಜೆಗೇರಿಸಲು ಸರ್ಕಾರ ಪರಿಶೀಲಿಸುತ್ತದೆ.

ಇ) ಕರ್ನಾಟಕ ಪುರಸಭೆ ಕಾಯ್ದೆ 1964 ರ ಪರಿಶ್ಚೇದ 3 ರನ್ವಯ ಈ ಕೆಳಕಂಡ ಮಾನ ದಂಡಗಳನ್ನು ಅನುಸರಿಸಲಾಗುತ್ತದೆ.

1. ನಿರ್ದಿಷ್ಟಪಡಿಸಿರುವ ಪ್ರದೇಶದ ಜನಸಂಖ್ಯೆಯ ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಐವತ್ತು ಸಾವಿರಕ್ಕಿಂತ ಕಡಿಮೆ ಇರುವುದು;

2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ಒಂದು ಸಾವಿರದ ಐನೂರಕ್ಕಿಂತ ಕಡಿಮೆಯಿಲ್ಲದಿರುವುದು;

3. ಸ್ಥಳೀಯ ಆಡಳಿತ ನಿರ್ವಹಣೆಗಾಗಿ ಅಂಥ ಪ್ರದೇಶಗಳಿಂದ ಹಿಂದಿನ ಜನಗಣತಿಯ ವರ್ಷದಲ್ಲಿ ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲಗಳಿಂದ ಉತ್ಪತ್ತಿಯಾದ ಆದಾಯವು 9 ಲಕ್ಷ ರೂ.ಗಳಿಗಿಂತ ಕಡಿಮೆಯಿಲ್ಲದಿರುವುದನ್ನು; ಅಥವಾ ವಾರ್ಷಿಕ ತಲಾ ಆದಾಯ ರೂಪಾಯಿ ನಲವತ್ತೈದರಂತೆ ಲೆಕ್ಕ ಹಾಕಲಾದ ಮೊತ್ತ ಇವುಗಳಲ್ಲಿ ಯಾವುದು ಗರಿಷ್ಟವೋ ಆ ಮೊತ್ತ.

4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದು.

ಈ) ಬಾದಾಮಿ, ಉಳ್ಳಾಳ, ಸಿರಗುಪ್ಪ, ಯಳಂದೂರು, ಬಂಟ್ವಾಳ, ಹರಪನಹಳ್ಳಿ, ಪಟ್ಟಣ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಯವರಿಂದ ಯಾವುದೇ ಪ್ರಸ್ತಾವನೆಯು ಬಂದಿರುವುದಿಲ್ಲ.

ಉ) ಸರ್ಕಾರವು ಚುನಾವಣಾ ವೆಚ್ಚವನ್ನು ಭರಿಸಬೇಕಾಗುತ್ತದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ : ಪಟ್ಟಣ ಪಂಚಾಯಿತಿಗಳು	ಕ್ರಮ ಸಂಖ್ಯೆ	ಜಿಲ್ಲೆ : ಪಟ್ಟಣ ಪಂಚಾಯಿತಿಗಳು	ಕ್ರಮ ಸಂಖ್ಯೆ	ಜಿಲ್ಲೆ : ಪಟ್ಟಣ ಪಂಚಾಯಿತಿಗಳು
1.	ಬೆಂಗಳೂರು ನಗರ ಜಿಲ್ಲೆ	8	ಶ್ರೀನಿವಾಸಪುರ	16	ಕೆ.ಆರ್. ಪೇಟೆ
2.	ಬೆಂಗಳೂರು (ಗ್ರಾ) ಜಿಲ್ಲೆ	5	ಚಿತ್ರದುರ್ಗ ಜಿಲ್ಲೆ	17	ನಾಗಮಂಗಲ
1	ನೆಲಮಂಗಲ	9	ಹೊಳಲ್ಕೆರೆ	18	ಪಾಂಡವಪುರ
3	ತುಮಕೂರು ಜಿಲ್ಲೆ	10	ಹೊಸದುರ್ಗ	8	ಚಾಮರಾಜನಗರ ಜಿಲ್ಲೆ
2	ಗುಬ್ಬಿ	11	ಮೊಳಕಾಲ್ಮೂರು	19	ಯಳಂದೂರು
3	ಕೊರಟಗೆರೆ	6	ದಾವಣಗೆರೆ ಜಿಲ್ಲೆ	20	ಹನೂರು
4	ಪಾವಗಡ	12	ಚೆನ್ನಗಿರಿ	9	ಶಿವಮೊಗ್ಗ ಜಿಲ್ಲೆ
5	ತುರುವೇಕೆರೆ	13	ಹರಪನ ಹಳ್ಳಿ	21	ಹೊಸನಗರ
4	ಕೋಲಾರ ಜಿಲ್ಲೆ	14	ಹೊನ್ನಾಳಿ	22	ಶಿರಾಳ ಕೊಪ್ಪ
6	ಬಾಗೇಪಲ್ಲಿ	15	ಜಗಳೂರು	23	ಸೊರಬ
7	ಗುಡಿಬಂಡೆ	7	ಮಂಡ್ಯ ಜಿಲ್ಲೆ	24	ತೀರ್ಥಹಳ್ಳಿ

25 ಜೋಗ್ ಕಾರ್ಗಲ್
10 ಮೈಸೂರು ಜಿಲೆ
26 ಬನ್ನೂರು
27 ಹೆಗ್ಗಡದೇವನಕೋಟೆ
28 ಪಿರಿಯಾಪಟ್ಟಣ
29 ಟಿ. ನರಸೀಪುರ
30 ಸರಗೂರು
11. ಕೊಡಗು ಜಿಲ್ಲೆ
31 ಸೋಮವಾರ ಪೇಟೆ
32 ವಿರಾಜಪೇಟೆ
12 ಹಾಸನ ಜಿಲ್ಲೆ
33 ಅಲೂರು
34 ಬೇಲೂರು
35 ಅರಕಲಗೂಡು
13 ಧಾರವಾಡ ಜಿಲ್ಲೆ
36 ಅಳ್ನಾವರ್
37 ಕಲಘಟಕಿ
38 ಕುಂದಗೋಳ್
39 ನವಲಗುಂದ್
14 ಚಿಕ್ಕಮಗಳೂರು ಜಿಲ್ಲೆ
40 ಕೊಪ್ಪ
41 ಮೂಡಿಗೆರೆ
42 ಎನ್.ಆರ್. ಪುರ
43 ಶೃಂಗೇರಿ
15 ಹಾವೇರಿ ಜಿಲ್ಲೆ
44 ಹಿರೇಕೇರೂರು
45 ಬಂಕಾಪುರ
46 ಶಿಗ್ಗಾಂ
16 ಉಡುಪಿ ಜಿಲ್ಲೆ
47 ಸಾಲಿಗ್ರಾಮ
17 ದಕ್ಷಿಣ ಕನ್ನಡ ಜಿಲ್ಲೆ
48 ಬಂಟ್ವಾಳ
49 ಬೆಳ್ತಂಗಡಿ
50 ಮುಲ್ಕಿ
51 ಸೂಳ್ಯ
52 ಉಳ್ಳಾಲ
18 ಗದಗ ಜಿಲ್ಲೆ
53 ಮುಂಡರಗಿ
54 ರೋಣ್
55 ಶಿರಹಟ್ಟಿ
56 ಮುಳಗುಂದ
57 ನರೇಗಲ್
19 ಗುಲ್ಬರ್ಗಾ ಜಿಲ್ಲೆ
58 ಆಫ್ಜಲ್ ಪುರ್
59 ಗುರುಮಿಟ್ ಕಲ್
60 ಚಿಂಚೋಳಿ
61 ಜೇವರ್ಗಿ
20 ಬಿಜಾಪುರ ಜಿಲ್ಲೆ
62 ಬಸವನಬಾಗೇವಾಡಿ
21 ಉತ್ತರ ಕನ್ನಡ ಜಿಲ್ಲೆ
63 ಅಂಕೋಲಾ
64 ಮುಂಡಗೋಡ್
65 ಸಿದ್ದಾಪುರ
66 ಹಳಿಯಾಳ
67 ಹೊನ್ನಾವರ
68 ಯಲ್ಲಾಪುರ
22. ಬೀದರ್ ಜಿಲ್ಲೆ
69 ಔರಾದ್
23. ರಾಯಚೂರು ಜಿಲ್ಲೆ
70 ದೇವ ದುರ್ಗ
71 ಲಿಂಗಸುಗೂರ್
72 ಮುದಗಲ್
24 ಬೆಳಗಾಂ ಜಿಲ್ಲೆ
73 ರಾಯಬಾಗ್
74 ಸದಲಗ
75 ಹುಕ್ಕೇರಿ
76 ಖಾನಾಪುರ
77 ಕೊಣ್ಣೂರು
78 ಕುಡಚಿ
25. ಬಾಗಲಕೋಟೆ ಜಿಲ್ಲೆ
79 ಬಾದಾಮಿ
80 ಬೀಳಗಿ
81 ಹುನಗುಂದ
82 ಿರೂರ್
83 ತೇರದಾಳ್
26. ಕೊಪ್ಪಳ ಜಿಲ್ಲೆ
84 ಕುಷ್ಟಗಿ
85 ಯಲಬುರ್ಗಾ
27. ಬಳ್ಳಾರಿ ಜಿಲ್ಲೆ
86 ಹೂವಿನಹಡಗಲಿ
87 ಕಮಲಾಪುರ
88 ಕೊಟ್ಟೂರು
89 ಕೂಡ್ಲಿಗಿ
90 ಸಂಡೂರು
91 ತಕ್ಕಲಕೋಟೆ
92 ಸಿರಗುಪ್ಪ